ವಿಜಯವಾಣಿ
ಕನ್ನಡಿಗರ ಧ್ವನಿ

# ಮಕ್ಕಳಿಗಾಗಿ ಮಿನಿ ಒಲಿಂಪಿಕ್ಸ್

**ಬೆಂಗಳೂರು:** ಎರಡೂವರೆ ವರ್ಷದಿಂದ ಐದೂವರೆ ವರ್ಷದ ಮಕ್ಕಳು ಕ್ರೀಡೆಯಲ್ಲಿ ಪಾಲ್ಗೊಳ್ಳುವ ಮೂಲಕ ಹೆಬ್ಬಾಳದ ಜೈನ್ ಹೆರಿಟೇಜ್ ಶಾಲೆಯಲ್ಲಿ 6ನೇ ಮಿನಿ ಒಲಂಪಿಕ್ಸ್ ಅತ್ಯಂತ ಸಂಘಟಿತವಾಗಿ ನಡೆಯಿತು.

ಮೊದಲ ದಿನದ ಸ್ಪರ್ಧೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಭಾರತದ ವೇಗದ ಓಟಗಾರ ಅರ್ಜುನ್ ದೇವಯ್ಯ ಕಾರ್ಯಕ್ರಮ ಉದ್ಘಾಟಿಸಿ, ಮಕ್ಕಳಲ್ಲಿ ಕ್ರೀಡಾ ಮನೋಭಾವವನ್ನು ಚಿಕ್ಕಂದಿನಿಂದಲೇ ಬೆಳೆಸಬೇಕು. ಪ್ರತೀ ಮಕ್ಕಳು ಪಾಠದ ಜೊತೆಗೆ ಆಟದಲ್ಲೂ ಮುಂದಿರಬೇಕು. ಶಾಲೆಯಲ್ಲಿ ಮತ್ತು ಮನೆಯಲ್ಲಿ ಮಕ್ಕಳಿಗೆ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹ ನೀಡಬೇಕು ಎಂದು ಕಿವಿ ಮಾತು ಹೇಳಿದರು. ಮಕ್ಕಳು ಪ್ರಮುಖ ಸ್ಪರ್ಧೆಗಳಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದರು. ಎರಡನೇ ದಿನದ ಕಾರ್ಯಕ್ರಮದಲ್ಲಿ ಮಾಜಿ ಕ್ರಿಕೆಟ್ ಆಟಗಾರ ವಿಜಯ್ ಭಾರದ್ವಾಜ್ ಮುಖ್ಯ ಅತಿಥಿಯಾಗಿದ್ದರು.

ಅಂದು ಮಕ್ಕಳಿಗೆ ಪಿಕ್ ಅಂಡ್ ಮೂವ್, ಕ್ವಿಕ್ ಕೌಂಟ್ ಆಟವನ್ನು ಏರ್ಪಡಿಸಲಾಗಿತ್ತು. ಕೊನೆಯ ದಿನದ ಕಾರ್ಯಕ್ರಮದಲ್ಲಿ ಮಾಜಿ ಭಾರತೀಯ ಹಾಕಿ ಆಟಗಾರ ಸಂದೀಪ್ ಮೈಕೆಲ್ ಮುಖ್ಯ ಅತಿಥಿಗಳಾಗಿ ಆಗಮಿಸಿ, ಈ ಸ್ಪರ್ಧೆ ಮಕ್ಕಳಿಗೆ ಖುಷಿ ನೀಡುವುದಷ್ಟೇ ಅಲ್ಲದೇ ತಮ್ಮ ಪ್ರತಿಭೆಯನ್ನು ನೋಡಿ ಇನ್ನೂ ಹೆಚ್ಚು ಬೆಳವಣಿಗೆಯಾಗಲು ಸಹಕಾರಿ ಎಂದರು.



ಜೈನ್ ಹೆರಿಟೇಜ್ ಶಾಲೆಯ 6ನೇ ಮಿನಿ ಒಲಂಪಿಕ್ಸ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಕ್ಷಣ